ದಿನಾಂಕಃ 05.11.2025. ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ –

58. ದಿ.09.09.2025 ರಂದು ಕಂಡಿಕೆ 5 ರಲ್ಲಿ ದೋಷಾರೋಪಣಾ ಪಟ್ಟಿಯ ಪುಟ ಸಂಖ್ಯೆ 1992 ಅಂತಿಮ ವರದಿಯ ಪುಟ ಸಂಖ್ಯೆ 71 ರಲ್ಲಿ Serial Number.40 ರೂ.36,800/– ಖರ್ಚನ್ನು ತೋರಿಸಿದ್ದು, ಸದರಿ ಖರ್ಚಿಗೆ ಯಾವುದೇ ದಾಖಲೆಗಳನ್ನು ದೋಷಾರೋಪಣಾ ಪಟ್ಟಿಯಲ್ಲಿ ಸಲ್ಲಿಸಿರುವುದಿಲ್ಲ. ಅದನ್ನು ಹೆಚ್ಚಾಗಿ ತೋರಿಸಿದ್ದು, ಅದನ್ನು ಒಟ್ಟು ಮೊತ್ತದಲ್ಲಿ ಕಳೆಯಬೇಕು ಎಂದು ಕೇಳಿದಾಗ ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ ಎಂದು ಹೇಳಿರುತ್ತೀರಿ. ಅದಕ್ಕೆ ಯಾವ ವಿವರ ಇರುತ್ತದೆ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ.

59. ದೋಷಾರೋಪಣಾ ಪಟ್ಟಿಯ ಪುಟ ಸಂಖ್ಯೆ 1992, ಅಂತಿಮ ವರದಿಯ ಪುಟ ಸಂಖ್ಯೆ 70 Sl. No.15 ರಲ್ಲಿ ದಿ.28.05.2002 ರಂದು ಹಿನಕಲ್ ಸೈಟ್ ನಂಬರ್ 2470/B, 40*60 ಅಳತೆ ಇರುವ ಸ್ವತ್ತನ್ನು ಖರೀದಿಸಿರುವ ಬಗ್ಗೆ ನಮೂದಿಸಿ, ಅದರಲ್ಲಿ ಖರೀದಿ ಮುದ್ರಾಂಕ ಶುಲ್ಕ ಮತ್ತು ಖರೀದಿ ಬಾಬ್ತು ಎಂದು 44,550/– ರೂಪಾಯಿಗಳನ್ನು ಖರ್ಚಿನಲ್ಲಿ ತೋರಿಸಿದ್ದು, ಅದು 35.64 ಶೇಕಡ ರಷ್ಟು ಮುದ್ರಾಂಕ ಶುಲ್ಕವಾಗುತ್ತದೆ. ಅಷ್ಟು ಮುದ್ರಾಂಕ ಶುಲ್ಕ 2002 ರಲ್ಲಿ ಇರಲಿಲ್ಲ. ಗರಿಷ್ಟ 13 ಶೇಕಡ ಇರಬಹುದು, ಆಗ ಅದರ ಶುಲ್ಕ 16,250/– ಆಗುತ್ತದೆ. ಆದರೆ 44,550/– ರೂಪಾಯಿಗಳನ್ನು ಹೆಚ್ಚಿಗೆ ಮುದ್ರಾಂಕ ಶುಲ್ಕ ತೋರಿಸಿದ್ದು, ಅದನ್ನು ಖರ್ಚಿನಲ್ಲಿ ಕಡಿಮೆ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿಯು ಸದರಿ ಖರೀದಿ ಪತ್ರವನ್ನು ನೋಡಿ ಅದರಲ್ಲಿ ಮುದ್ರಾಂಕ ಶುಲ್ಕ ಮತ್ತು ಇತರೆ ಶುಲ್ಕಗಳು 2,600/– ರೂಪಾಯಿ ಇರುತ್ತದೆ, ಜೊತೆಗೆ ಉಪನೊಂದಣಾಧಿಕಾರಿ, ಮೈಸೂರು ರವರ ಪ್ರಮಾಣ ಪತ್ರ ಇದ್ದು, ಅದರಲ್ಲಿ ಸ್ವತ್ತಿನ ಬೆಲೆ 3,00,000/– ಇದ್ದು, ಆದರೆ 1,25,000/– ದಾಖಲೆಯಲ್ಲಿ ತೋರಿಸಿದ್ದರಿಂದ 19,950/– ಕೊರತೆ ಮುದ್ರಾಂಕ ಶುಲ್ಕ ಮತ್ತು

3,500/- ಕೊರತೆ ನೊಂದಣಿ ಶುಲ್ಕವನ್ನು ಪಾವತಿಸುವಂತೆ ಆದೇಶ ಮಾಡಿದ್ದು, ಆ ಪ್ರಕಾರ ಒಟ್ಟು 23,450/- ಕೊರತೆ ಶುಲ್ಕ ಮತ್ತು ದಾಖಲೆ ಮೇಲೆ ಮೂಲ 2,600/- ಶುಲ್ಕವನ್ನು ತುಂಬಿದ್ದು, ಅದನ್ನು ಕೂಡಿಸಿದರೆ 26,050/- ಆಗುತ್ತದೆ ಎಂದು ಸಾಕ್ಷಿ ನುಡಿಯತ್ತಾರೆ. ಹಾಗಾದರೆ 44,550/- ಶುಲ್ಕದಲ್ಲಿ 26,050/- ರೂಪಾಯಿಯನ್ನು ಕಡಿಮೆ ಮಾಡಬೇಕು ಎಂದರೆ ಸರಿ. ಅದನ್ನು ಖರ್ಚಿನಲ್ಲಿ ಕಡಿಮೆಯಾಗಿ ತೋರಿಸಬೇಕು ಎಂದರೆ ಸರಿ.

60. ಅದೇ ರೀತಿ ಸದರಿ ಸೈಟ್ ನಂಬರ್ 2470/B ಅನ್ನು ಶಿವಪ್ರಸಾದ್ ತಮ್ಮ ಪತ್ನಿಯಾದ ವೀಣಾ ಪ್ರಸಾದ್ ರವರಿಗೆ ದಿ.27.03.2003 ರಂದು ದಾನ ಪತ್ರವನ್ನು ಮಾಡಿದ್ದು, ಅದರಲ್ಲಿ ಕೇವಲ 560/- ರೂಪಾಯಿ ಶುಲ್ಕ ಪಾವತಿಸಿದ್ದು, ಆದರೆ ಅದಕ್ಕೆ ಸಂಬಂಧಪಟ್ಟಂತೆ 35,440/- ರೂಪಾಯಿ ಮುದ್ರಾಂಕ ಶುಲ್ಕವನ್ನು ತೋರಿಸಲಾಗಿರುತ್ತದೆ, ಅದು ಕೂಡ ಕಡಿತವಾಗಬೇಕು ಎಂದರೆ ಸಾಕ್ಷಿಯೂ ದಾಖಲೆಯನ್ನು ನೋಡಿ ಅದರಲ್ಲಿ 2 ನೇ ಪುಟದಲ್ಲಿ ದೃಢೀಕರಿಸಿದಂತೆ 2,050/- ಶುಲ್ಕವಾಗುತ್ತದೆ ಎಂದು ನುಡಿಯುತ್ತಾರೆ. ಹಾಗಾದರೆ 2,050/- ರೂಪಾಯಿ ಶುಲ್ಕವನ್ನು ಬಿಟ್ಟು ಉಳಿದ ಮೊತ್ತ 35,440/- ರೂಪಾಯಿಯಲ್ಲಿ ಕಡಿತವಾಗಬೇಕು ಎಂದರೆ ಸರಿ. ಅದೇ ರೀತಿ 2,050/- ರೂಪಾಯಿ ಬಿಟ್ಟು ಉಳಿದ ಮೊತ್ತ 33,390/- ರೂಪಾಯಿಗಳನ್ನು ಖರ್ಚಿನಲ್ಲಿ ಕಡಿಮೆ ಮಾಡಬೇಕು ಎಂದರೆ ಸರಿ.

61. ಎಲ್ ಐ ಸಿ ಪಾಲಿಸಿ ನಂ.720606625 ಗೆ ಸಂಬಂಧಪಟ್ಟಂತೆ ಪುಟ ಸಂಖ್ಯೆ 70 ರಲ್ಲಿ ಕ್ರಮ ಸಂಖ್ಯೆ 23 ರಲ್ಲಿ ಸದರಿ ಪಾಲಿಸಿಗೆ ಸಂಬಂಧಪಟ್ಟಂತೆ ಆದಾಯ 80,000/- ತೋರಿಸಿದ್ದು, ಖರ್ಚು 1,31,711/- ರೂ. ತೋರಿಸಲಾಗಿರುತ್ತದೆ. ಆದರೆ ಪಾಲಿಸಿಗೆ ಸಂಬಂಧಪಟ್ಟಂತೆ ಪ್ರೀಮಿಯಂ ಗೆ ತುಂಬಿದ ಖರ್ಚು ಬಂದ ಆದಾಯಕ್ಕಿಂತ ಕಡಿಮೆಯಾಗಬೇಕು. 1,31,711/- ರೂ. ಖರ್ಚಿನಲ್ಲಿ ಕಡಿತವಾಗಬೇಕು ಎಂದರೆ ಸಾಕ್ಷಿಯು ಸದರಿ ಪಾಲಿಸಿಯನ್ನು ನೋಡಿ ದೋಷಾರೋಪಣಾ ಪಟ್ಟಿಯಲ್ಲಿ ದಾಖಲೆಯನ್ನು ಸಲ್ಲಿಸುವಾಗ ಆದಾಯ ತೋರಿಸುವ ಕಾಲಂ ನಲ್ಲಿ ಖರ್ಚನ್ನು ತೋರಿಸಿದ್ದು, ಖರ್ಚಿನ ಕಾಲಂ ನಲ್ಲಿ ಆದಾಯವನ್ನು

ತೋರಿಸಿ, ತಪ್ಪಾಗಿ ನೊಂದಾಗಿರುತ್ತದೆ ಎಂದು ನುಡಿಯುತ್ತಾರೆ. ಹಾಗಾದರೆ ಅಂತಿಮ ಚೆಕ್ ಅವಧಿಯ ಖರ್ಚಿನಲ್ಲಿ 1,31,711/- ರೂ. ಕಡಿತವಾಗಿ ಆದಾಯದಲ್ಲಿ ಸೇರಿಸಬೇಕು ಮತ್ತು ಆದಾಯದಿಂದ 80,000/- ರೂ. ಕಡಿತವಾಗಿ ಖರ್ಚಿನಲ್ಲಿ ತೋರಿಸಬೇಕಾಗುತ್ತದೆ ಎಂದರೆ ಸರಿ.

62. ಐ ಸಿ ಐ ಸಿ ಐ ಬ್ಯಾಂಕ್ ನ ಪಾಲಿಸಿ ನಂ.372617/74 ಗೆ ಸಂಬಂಧಪಟ್ಟಂತೆ ದೋಷಾರೋಪಣಾ ಪಟ್ಟಿಯ ಪುಟ ಸಂಖ್ಯೆ 1992 ಕ್ರಮ ಸಂಖ್ಯೆ 28 ರಲ್ಲಿ ಸದರಿ ಪಾಲಿಸಿ ಸಂಬಂಧಪಟ್ಟಂತೆ ಆದಾಯವನ್ನು 1,19,544/- ಎಂದು ತೋರಿಸಿದ್ದು, ಖರ್ಚನ್ನು 78,000/- ಎಂದು ತೋರಿಸಲಾಗಿರುತ್ತದೆ. ಸದರಿ ಪಾಲಿಸಿಯ ಮೊತ್ತ 1,19,544/- ರೂ. ಯಾರ ಖಾತೆಗೆ ಬಂದಿರುತ್ತದೆ ಎಂಬುದರ ಬಗ್ಗೆ ಪ್ರತ್ಯೇಕ ದಾಖಲೆ ಇರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಪಾಲಿಸಿಯ ಪ್ರೀಮಿಯಂ ಮೊತ್ತವನ್ನು ಶಿವಪ್ರಸಾದ್‌ರವರು ಪಾವತಿಸಿದ್ದರಿಂದ ಸದರಿ ಹಣ ಅವರ ಖಾತೆಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ದಾಖಲೆ ಇರುವುದಿಲ್ಲ. ಸದರಿ ಮೊತ್ತವನ್ನು ಒಟ್ಟು ಮೊತ್ತದಿಂದ ಕಡಿಮೆ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ.

63. ದೋಷಾರೋಪಣಾ ಪಟ್ಟಿಯ ಪುಟ ಸಂಖ್ಯೆ 1992 ಕ್ರಮ ಸಂಖ್ಯೆ 36 ರಲ್ಲಿ 2,72,910/- ರೂಪಾಯಿಯನ್ನು ಆಸ್ತಿ ಎಂದು ತೋರಿಸಿದ್ದು ಮತ್ತು ಕ್ರಮ ಸಂಖ್ಯೆ 37 ರಲ್ಲಿ 56,390/- ರೂಪಾಯಿ ಆಸ್ತಿ ಎಂದು ತೋರಿಸಿ, ಅದರಲ್ಲಿ ಕ್ರಮ ಸಂಖ್ಯೆ 36 ಕ್ಕೆ ಹಿನಕಲ್ ನಲ್ಲಿ ತಂದೆ ಮನೆಯ ಆರೋಪಿತರ ಕೊಠಡಿಯಲ್ಲಿ ಪಂಚನಾಮೆ ಕಾಲದಲ್ಲಿ ದೊರತೆ ವಸ್ತುಗಳ ಮೌಲ್ಯ ಎಂದು ನಮೂದಿಸಿದ್ದು, ಅದೇ ರೀತಿ ಕ್ರಮ ಸಂಖ್ಯೆ 37 ಕ್ಕೆ ಪಂಚನಾಮೆ ಕಾಲದಲ್ಲಿ ದೊರೆತ ನಗದು ಹಣ ಎಂದು ತೋರಿಸಲಾಗಿದ್ದು, ಈ ಮೊತ್ತವನ್ನು ಕೇವಲ ಮನೆಯಲ್ಲಿ ಇದ್ದ ಸದಸ್ಯರ ಹೇಳಿಕೆಯ ಮೇರೆಗೆ ನಮೂದಿಸಲಾಗಿದ್ದು, ಸದರಿ ಮೊತ್ತಗಳಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆ ಅಥವಾ ಪುರಾವೆ ಇರುವುದಿಲ್ಲ. ಆ ಕಾರಣ ಸದರಿ ಕ್ರಮ ಸಂಖ್ಯೆ 36 ಮತ್ತು 37 ರಲ್ಲಿ ನಮೂದಿಸಿದ ಆಸ್ತಿಯ ಮೊತ್ತವನ್ನು ಒಟ್ಟು ಮೊತ್ತದಿಂದ ಕಡಿಮೆ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಪಟ್ಟಂತೆ ಯಾವುದಾದರು ದಾಖಲೆ ಇರುತ್ತದೆಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ.

ಆ ಕಾರಣ ಸದರಿ ಕ್ರಮ ಸಂಖ್ಯೆ 36 ಮತ್ತು 37 ರಲ್ಲಿಯ ಮೊತ್ತವನ್ನು ಒಟ್ಟು ಮೊತ್ತದಿಂದ ಕಡಿಮೆ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ಕೇವಲ ನಿಪಿ.2 ಮಹಜರ್ ನಲ್ಲಿ ನಮೂದಿಸಿದ ಕಾರಣ ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿ ಆಸ್ತಿಯಾಗಿ ಸೇರಿಸಿರುತ್ತೇನೆ ಎಂದರೆ ಸರಿ. ನಿಪಿ.2 ಮಹಜರ್ ನಲ್ಲಿಯೂ ಕೂಡ ಸದರಿ ಮೊತ್ತಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳು ಇರುವ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ, ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.